# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶ ಮತ್ತು ಬ್ಯಾಂಕ್ ತಂತ್ರಾಂಶಗಳ ಸಂಯೋಜನೆ ಕುರಿತು.

ಉಲ್ಲೇಖ: 1. ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17-05-2014 ರಂದು ನಡೆದ ಸಭೆಯ ನಡವಳಿಗಳು.

2. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಅವರ ಪತ್ರ ಸಂಖ್ಯೆ: Comp/18/2010-11, ದಿನಾಂಕ:09-06-2014.

*********

ಪ್ರಸ್ತಾವನೆ:

ಉಲ್ಲೇಖ(1)ರಂತೆ ಸರ್ಕಾರದ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 17-05-2014 ರಂದು ನಡೆದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1. SROs to accept digitally signed Form No.3 from banks.

2. Instead of parties visiting the SRO for filing the Declaration Banks shall send the Form 3 document electronically after scanning to KAVERI system. The KAVERI software can be modified such that instead of taking the printout and affixing the stamp of the SR, the digitally signed and scanned Declaration From 3 can be once again digitally signed by SR. This final digitally signed document along with the index data is stored in the data base. Whenever required the printout of the same can taken and issued.

3. The Commissioner , SSLR & Director ( Bhoomi) should request the banks to collect the mutation fee and remit the same to the taluk office. In this regard a proper mechanism should also be put in place by BMC.

4. Since the digitally signed Declaration Form No 3 is being generated by Banks using the Bhoomi data through Bhoomi - Bank module and sent both to taluk office and SRO, there is no need to send J-Slip to Taluk office by the SRO.

ಉಲ್ಲೇಖ(2)ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಲೂರು ರವರು ಕರ್ನಾಟಕ ಅಗ್ರಿಕಲ್ಚರಲ್ ಕ್ರೆಡಿಟ್ ಆಪರೇಷನ್ಸ್ ಅಂಡ್ ಮಿಸ್ಲೇನಿಯಸ್ ಪ್ರಾವಿಜನ್ಸ್ ಆಕ್ಟ್ -1974 ಮತ್ತು ಅದರಡಿ ರಚಿಸಿರುವ ನಿಯಮಾವಳಿಗಳನ್ವಯ ನಮೂನೆ-3 ಮತ್ತು ಡಿಸ್ಚಾರ್ಜ್ ಸರ್ಟಿಫಿಕೇಟ್‌ಗಳನ್ನು ವಿದ್ಯುನ್ಮಾನ ದ್ವಾರ ಉಪ-ನೋಂದಣಿ ಕಛೇರಿಗಳಲ್ಲಿ ಡೇಟಾ ನಮೂದಿಸಿಕೊಂಡು ದಸ್ತಾವೇಜಿನ ಪ್ರತಿಯನ್ನು ವಿದ್ಯುನ್ಮಾನ ರೂಪದಲ್ಲಿ ಸಂಗ್ರಹಿಸಿಡಲು ಅನುಮತಿಯನ್ನು ಕೋರಿರುತ್ತಾರೆ. ಅವರು ಕೋರಿರುವ ವರದಿಯಲ್ಲಿ ಕಾವೇರಿ ತಂತ್ರಾಂಶ ಮತ್ತು ಬ್ಯಾಂಕ್ ತಂತ್ರಾಂಶ ಸಂಯೋಜನೆಯು ಒಳಗೊಂಡಿದೆ.

ಮು.ತಿ.ನೋ

ಮೇಲಿನ ಕಾರ್ಯದ ಅನುಷ್ಠಾನವು ರೈತರುಗಳು ಕಛೇರಿಗೆ ಭೇಟಿ ನೀಡುವ ಅಗತ್ಯ ಉದ್ಭವಿಸದು. ಅವರ ಸಮಯ ಮತ್ತು ಶ್ರಮ ಬಹಳ ಉಳಿಯುವುದು ಹಾಗೂ ರೈತರು ಶೀಘ್ರವಾಗಿ ಬೆಳೆ ಸಾಲ ಪಡೆಯಲು ಅನುಕೂಲವಾಗುವುದು ಮತ್ತು ಉಪ-ನೋಂದಣಿ ಕಛೇರಿಗಳಲ್ಲಿ ಜನಸಂದಣಿ ಕಡಿಮೆಯಾಗುವುದು.

ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾರ್ವಜನಿಕ ಹಿತದೃಷ್ಟಿ ಹಾಗೂ ಆಡಳಿತದ ಹಿತದೃಷ್ಟಿಯಿಂದ ಈ ಮುಂದಿನಂತೆ ಆದೇಶ ಮಾಡಿದೆ.

## ಆದೇಶ

ಸರ್ಕಾರದ ಆದೇಶ ಸಂಖ್ಯೆ:ಕಂಇ 49 ಮುನೋಮು,ಬೆಂಗಳೂರು, ದಿನಾಂಕ: 18-08-2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕಾವೇರಿ ತತ್ರಾಂಶ ಮತ್ತು ಬ್ಯಾಂಕ್ ತತ್ರಾಂಶ ಸಂಯೋಜನೆಗೊಳಿಸಿ ಕರ್ನಾಟಕ ಅಗ್ರಿಕಲ್ಚರಲ್ ಕ್ರೆಡಿಟ್ ಆಪರೇಷನ್ಸ್ ಅಂಡ್ ಮಿಸಲೇನಿಯಸ್ ಪ್ರಾವಿಜನ್ಸ್ ಆಕ್ಟ್-1974 ಮತ್ತು ಅದರಡಿ ರಚಿಸಿರುವ ನಿಯಮಾವಳಿಗಳನ್ವಯ ನಮೂನೆ-3 ಮತ್ತು ಡಿಸ್ಚಾರ್ಜ್ ಸರ್ಟಿಫಿಕೇಟ್‌ಗಳನ್ನು ವಿದ್ಯುನ್ಮಾನ ದ್ವಾರ ಫೈಲು ಮಾಡಿಕೊಳ್ಳಲು ಅನುಮತಿಸಿ ಆದೇಶಿಸಿದೆ ಹಾಗೂ ಈ ಹಂತದಲ್ಲಿ ಉಪ-ನೋಂದಣಿ ಕಛೇರಿಯಲ್ಲಿ ಸಂಗ್ರಹಿಸುತ್ತಿದ್ದ ಮ್ಯೂಟೇಷನ್ ಶುಲ್ಕವನ್ನು ಇನ್ನು ಮುಂದೆ ಸಂಬಂಧಪಟ್ಟ ತಹಶೀಲ್ದಾರ್ ಕಛೇರಿಯಲ್ಲಿ ಸಂಗ್ರಹಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ನಾರಾಯಣಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ).

18/8

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಇ-ಆಡಳಿತ) , ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ , ಬೆಂಗಳೂರು.
4. ಎಲ್ಲಾ ಪ್ರಾದೇಶಿಕ ಆಯುಕ್ತರು, ಮೈಸೂರು, ಗುಲ್ಬರ್ಗಾ, ಬೆಳಗಾಂ ಹಾಗೂ ಬೆಂಗಳೂರು ರವರಿಗೆ.
5. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರು.
6. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿರವರುಗಳಿಗೆ.
8. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರು.
9. ಉಪ-ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್ ರವರುಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ.

ಮು.ತಿ.ನೋ